# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ದಕ್ಷಿಣ ಕನ್ನಡ ಮಂಗಳೂರು

ಸಂಖ್ಯೆ/ಸಿಆರ್‌ಎಸ್/3921 /2025 ದಿನಾಂಕಃ 02.04.2025

## ಟೆಂಡರ್ ಪ್ರಕಟಣೆ

ಈ ಕೆಳಗೆ ಸಹಿ ಮಾಡಿರುವವರು ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ,

ದಕ್ಷಿಣ ಕನ್ನಡ, ಮಂಗಳೂರು, ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ 116.52 ಚದರ ಮೀಟರ್ ವಿಸ್ತೀರ್ಣವುಳ್ಳ ಕಟ್ಟಡವನ್ನು ಮಾತ್ರ ಹೋಟೇಲ್ (ಕ್ಯಾಂಟೀನ್) ನಡೆಸುವ ಉದ್ದೇಶಕ್ಕಾಗಿ ಈ ಕೆಳಗೆ ನಮೂದಿಸಿದ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟು ಗುತ್ತಿಗೆ/ಲೈಸೆನ್ಸ್ ಆಧಾರದ ಮೇಲೆ ಕೊಡುವುದಿದ್ದು, ಆಸಕ್ತ ಅರ್ಜಿದಾರರಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ನಿಗಧಿತ ಟೆಂಡರ್ ನಮೂನೆ ಹಾಗೂ ಇತರೆ ವಿವರಗಳು ದಕ್ಷಿಣ ಕನ್ನಡ ಜಿಲ್ಲಾ ನ್ಯಾಯಾಲಯದ ಕಚೇರಿಯಲ್ಲಿ ಹಾಗೂ ವೆಬ್‌ಸೈಟ್ https://dk.dcourts.gov.in/notice-category/tenders/ ನಲ್ಲಿ ಲಭ್ಯವಿರುತ್ತದೆ. ನಿಗಧಿತ ಟೆಂಡರ್ ನಮೂನೆ (ಅನುಬಂಧ-1) ಯನ್ನು ಭರ್ತಿಮಾಡಿ ದಿನಾಂಕ 16.04.2025 ರ ಸಂಜೆ 4.00 ಗಂಟೆಯ ಒಳಗಾಗಿ ಮೊಹರಾದ ಲಕೋಟೆಯಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ಕಚೇರಿಗೆ ಸಲ್ಲಿಸತಕ್ಕದ್ದು.

## ಃ ಷರತ್ತು ಹಾಗೂ ನಿಬಂಧನೆಗಳು ಃ

1. ಸದರಿ ಕಟ್ಟಡದಲ್ಲಿ ಸಸ್ಯಾಹಾರಿ ಹೋಟೇಲ್ (ಕ್ಯಾಂಟೀನ್) ನಡೆಸುವ ಉದ್ದೇಶಕ್ಕಾಗಿ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ನಿಗದಿಪಡಿಸಿದಂತೆ ಪ್ರತಿ ತಿಂಗಳ ಕನಿಷ್ಟ ಬಾಡಿಗೆ ದರ ರೂ.39,000/- ಯಾ ಮೇಲ್ಪಟ್ಟು, ಅತೀ ಹೆಚ್ಚು ಬಾಡಿಗೆ ಪ್ರಸ್ತಾವನೆ ಸಲ್ಲಿಸುವ ಟೆಂಡರ್‌ದಾರರಿಗೆ ರೂ.20,000/- ಗಳ ಠೇವಣಿ ಪಡೆದು ಗುತ್ತಿಗೆ ಆಧಾರದ ಮೇಲೆ ನೀಡಲಾಗುವುದು.
2. ಆಸಕ್ತ ಅರ್ಜಿದಾರರು ಟೆಂಡರ್ ದಸ್ತಾವೇಜಿನೊಂದಿಗೆ 10,000/- ರೂಪಾಯಿಗಳ EMD ಮೊಬಲಗನ್ನು Prl. District & Sessions Judge, D.K., Mangaluru ಇವರ ಹೆಸರಿನಲ್ಲಿ ತೆಗೆದ ರಾಷ್ಟ್ರೀಕೃತ ಬ್ಯಾಂಕಿನ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಸಲ್ಲಿಸತಕ್ಕದ್ದು. EMD ರಹಿತ ಟೆಂಡರ್ ದಸ್ತಾವೇಜುಗಳನ್ನು ಟೆಂಡರ್ ಪ್ರಕ್ರಿಯೆಗಾಗಿ ಪರಿಗಣಿಸಲಾಗುವುದಿಲ್ಲ. EMD ಮೊಬಲಗನ್ನು ಟೆಂಡರ್ ಪ್ರಕ್ರಿಯೆಯು ಸಂಪೂರ್ಣವಾಗಿ ಮುಕ್ತಾಯಗೊಂಡ ಬಳಿಕ ಹಿಂದಿರುಗಿಸಲಾಗುವುದು.
3. ಯಶಸ್ವಿ ಬಿಡ್ಡುದಾರರು ಗುತ್ತಿಗೆ ನೀಡಿಕೆಯ ಆದೇಶವಾದ 7 ದಿನಗಳ ಒಳಗಾಗಿ ಹೋಟೇಲ್

……..2

(ಕ್ಯಾಂಟೀನ್) ಕಾರ್ಯಾಚರಣೆಯನ್ನು ಪ್ರಾರಂಭಿಸತಕ್ಕದ್ದು, ತಪ್ಪಿದ್ದಲ್ಲಿ EMD ಮೊಬಲಗನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮಕೈಗೊಳ್ಳಲಾಗುವುದು ಹಾಗೂ 2ನೇ ಅತೀ ಹೆಚ್ಚಿನ ಬಿಡ್ದುದಾರರಿಗೆ ಹೋಟೇಲ್ (ಕ್ಯಾಂಟೀನ್) ನಡೆಸಲು ಗುತ್ತಿಗೆ ನೀಡಲಾಗುವುದು.

4. ಸದರಿ ಹೋಟೇಲ್ (ಕ್ಯಾಂಟೀನ್) ನಡೆಸುವರೇ ರೂ.20,000/- ಠೇವಣಿಯನ್ನು ಇಡತಕ್ಕದ್ದು ಮತ್ತು ಸದರಿ ಹಣಕ್ಕೆ ಯಾವುದೇ ರೀತಿಯ ಬಡ್ಡಿ ಇರುವುದಿಲ್ಲ, ಗುತ್ತಿಗೆಯ ಅವಧಿ ಮುಗಿದ ನಂತರ ಸುಸ್ಥಿತಿಯಲ್ಲಿ ಕಟ್ಟಡವನ್ನು ಖಾಲಿ ಮಾಡಿದ ನಂತರ ಯಾವುದೇ ಪಾವತಿ ಬಾಕಿ ಇದ್ದಲ್ಲಿ ಅದನ್ನು ಕಡಿತಗೊಳಿಸಿ, ಉಳಿದ ಠೇವಣಿ ಹಣವನ್ನು ಮರಳಿಸಲಾಗುವುದು.

5. ಸದರಿ ಹೋಟೇಲ್ (ಕ್ಯಾಂಟೀನ್) ನಡೆಸುವ ಕುರಿತಂತೆ ಈ ಕೆಳಗೆ ಸಹಿ ಮಾಡಿದವರ ಜೊತೆಯಲ್ಲಿ ನಿಬಂಧನೆಗಳಿಗನುಸಾರವಾಗಿ ಒಪ್ಪಂದ ಪತ್ರ ಮಾಡಿಕೊಳ್ಳತಕ್ಕದ್ದು. ಕಾಲಕಾಲಕ್ಕೆ ಬದಲಾದ ನಿಬಂಧನೆಗಳಿಗೆ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.

6. ಅರ್ಜಿದಾರರು ಹೋಟೇಲ್ ಉದ್ಯಮ ನಡೆಸಲು ಸಂಬಂಧಪಟ್ಟ ಪ್ರಾಧಿಕಾರದವರಿಂದ ಪಡೆದ ಪ್ರಮಾಣಪತ್ರ (ಟ್ರೇಡ್ ಲೈಸೆನ್ಸ್) ಹಾಗೂ ಸಂಬಂಧಿತ ತೆರಿಗೆ ಇಲಾಖೆಯ ನೋಂದಣಿ ಪತ್ರವನ್ನು ಹೊಂದಿರತಕ್ಕದ್ದು ಹಾಗೂ ಟೆಂಡರ್ ದಸ್ತಾವೇಜಿನೊಂದಿಗೆ ಸಲ್ಲಿಸತಕ್ಕದ್ದು ಮತ್ತು ಉದ್ಯಮ ಸ್ಥಳದಲ್ಲಿ ಕಾಣುವಂತೆ ಪ್ರದರ್ಶಿಸತಕ್ಕದ್ದು.

7. ಹೋಟೇಲ್ (ಕ್ಯಾಂಟೀನ್) ನಡೆಸುವ ಗುತ್ತಿಗೆದಾರರು ಪ್ರತಿ ತಿಂಗಳ ಬಾಡಿಗೆಯನ್ನು ತಪ್ಪದೇ ನಿಗದಿತ ದಿನಾಂಕದೊಳಗಾಗಿ ದಕ್ಷಿಣ ಕನ್ನಡ ಜಿಲ್ಲಾ ನ್ಯಾಯಾಲಯದ ಕಚೇರಿಯಲ್ಲಿ ಪಾವತಿಸತಕ್ಕದ್ದು, ತಪ್ಪಿದಲ್ಲಿ ಗುತ್ತಿಗೆಯನ್ನು ರದ್ದುಪಡಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

8. ಗುತ್ತಿಗೆ ಪಡೆಯುವ ಅರ್ಜಿದಾರರ ಇತ್ತೀಚಿನ ಎರಡು ಭಾವಚಿತ್ರಗಳನ್ನು, ಗುರುತುಪತ್ರ ಮತ್ತು ವಿಳಾಸದ ದಾಖಲೆಯನ್ನು ಹಾಜರುಪಡಿಸತಕ್ಕದ್ದು. ಅದೇ ರೀತಿ ಹೋಟೇಲ್ (ಕ್ಯಾಂಟೀನ್)ನಲ್ಲಿ ಕೆಲಸ ಮಾಡುವ ಕೆಲಸಗಾರರ ಗುರುತುಪತ್ರ ಹಾಗೂ ವಿಳಾಸದ ದಾಖಲೆಯನ್ನು ಕೂಡ ಹಾಜರುಪಡಿಸತಕ್ಕದ್ದು.

9. ಹೋಟೇಲ್ (ಕ್ಯಾಂಟೀನ್) ನಲ್ಲಿ ತಯಾರಿಸುವ ಆಹಾರ ಪದಾರ್ಥಗಳ ಪಟ್ಟಿ ಹಾಗೂ ಅವುಗಳ ಪದಾರ್ಥವಾರು ಪ್ರಮಾಣ ಹಾಗೂ ದರಗಳ ಪಟ್ಟಿಯನ್ನು ಟೆಂಡರ್ ದಸ್ತಾವೇಜಿನೊಂದಿಗೆ ಅನುಬಂಧ-2 ರಲ್ಲಿ ಸಲ್ಲಿಸತಕ್ಕದ್ದು, ಯಶಸ್ವಿ ಬಿಡ್ದುದಾರರು ಟೆಂಡರ್ ದಸ್ತಾವೇಜಿನೊಂದಿಗೆ ಸಲ್ಲಿಸಿದ/ಪ್ರಧಾನ ಜಿಲ್ಲಾ ನ್ಯಾಯಾಧೀಶರಿಂದ ಅನುಮೋದಿಸಲ್ಪಟ್ಟ ದರಪಟ್ಟಿಯ ಪ್ರಕಾರವೇ ಆಹಾರ ಪದಾರ್ಥಗಳನ್ನು ಗ್ರಾಹಕರಿಗೆ ಸರಬರಾಜು ಮಾಡತಕ್ಕದ್ದು ಹಾಗೂ ಆಹಾರ ಪದಾರ್ಥಗಳ ದರಗಳನ್ನು ಪರಿಷ್ಕರಿಸುವ ಮುಂಚೆ ಪ್ರಧಾನ ಜಿಲ್ಲಾ ನ್ಯಾಯಾಧೀಶರ ಲಿಖಿತ ಪರವಾನಗಿ ಪಡೆಯತಕ್ಕದ್ದು.

.......3

10. ಸದರಿ ಹೋಟೇಲ್ (ಕ್ಯಾಂಟೀನ್) ನಲ್ಲಿ ತಯಾರಿಸುವ ಅಥವಾ ಮಾರಾಟ ಮಾಡುವ ಎಲ್ಲಾ ಆಹಾರ ಪದಾರ್ಥಗಳು ಸ್ವಚ್ಛ ಮತ್ತು ಆರೋಗ್ಯಪೂರ್ಣವಾಗಿರತಕ್ಕದ್ದು ಹಾಗೂ ಆಹಾರ ಪದಾರ್ಥಗಳ ತಯಾರಿಕೆಗಾಗಿ ಉತ್ತಮ ಗುಣಮಟ್ಟದ ತರಕಾರಿ, ದಾನ್ಯಗಳು ಹಾಗೂ ಖಾದ್ಯತೈಲವನ್ನು ಮಾತ್ರ ಉಪಯೋಗಿಸತಕ್ಕದ್ದು, ಅಲ್ಲದೇ ಕೇವಲ ಸಸ್ಯಾಹಾರಿ ಆಹಾರ ಪದಾರ್ಥಗಳನ್ನು ಮಾತ್ರ ತಯಾರಿ ಅಥವಾ ಮಾರಾಟ ಮಾಡತಕ್ಕದ್ದು. ತಪ್ಪಿದ್ದಲ್ಲಿ ಗುತ್ತಿಗೆಯನ್ನು ರದ್ದುಪಡಿಸಲಾಗುವುದು ಮತ್ತು ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲು ಶಿಫಾರಸ್ಸು ಮಾಡಲಾಗುವುದು.
11. ಲೈಸೆನ್ಸ್ ನೀಡಿಕೆ ಪ್ರಾಧಿಕಾರವು ಸದರಿ ಹೋಟೇಲ್ (ಕ್ಯಾಂಟೀನ್) ನಲ್ಲಿ ತಯಾರಿಸುವ ಅಥವಾ ಮಾರಾಟ ಮಾಡುವ ಎಲ್ಲಾ ಆಹಾರ ಪದಾರ್ಥಗಳ ಗುಣಮಟ್ಟ ಹಾಗೂ ಪ್ರಮಾಣವನ್ನು ಯಾವಾಗ ಬೇಕಾದರೂ ಪರೀಕ್ಷಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಸದರಿ ಹೋಟೇಲ್ (ಕ್ಯಾಂಟೀನ್) ನಲ್ಲಿ ತಯಾರಿಸಲಾದ ಆಹಾರ ಪದಾರ್ಥಗಳನ್ನು ಸದ್ರಿ ಹೋಟೇಲ್ (ಕ್ಯಾಂಟೀನ್) ಆವರಣದಲ್ಲಿ ಮಾತ್ರ ಮಾರಾಟ ಮಾಡತಕ್ಕದ್ದು.
12. ವಿದ್ಯುತ್ ಬಿಲ್ಲು, ನೀರಿನ ಕರ ಹಾಗೂ ಸ್ವಚ್ಛತೆಗೆ ಸಂಬಂಧಿಸಿ ತಗಲುವ ಖರ್ಚನ್ನು ಮತ್ತು ಇನ್ನಿತರೆ ಯಾವುದೇ ಖರ್ಚನ್ನು ಗುತ್ತಿಗೆದಾರರೇ ಭರಿಸತಕ್ಕದ್ದು. ಗುತ್ತಿಗೆದಾರರು, ಮಂಗಳೂರು ಮಹಾನಗರಪಾಲಿಕೆ ವತಿಯಿಂದ ಜಾರಿಮಾಡಿರುವ ಕಸ/ತ್ಯಾಜ್ಯ ವಿಲೇವಾರಿ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳತಕ್ಕದ್ದು.
13. ಗುತ್ತಿಗೆದಾರರು ಸದರಿ ಹೋಟೆಲ್ (ಕ್ಯಾಂಟಿನ್) ಉದ್ಯಮವನ್ನು ಬೆಳಿಗ್ಗೆ 7.00 ಗಂಟೆಯಿಂದ ಸಾಯಂಕಾಲ 7.00 ಗಂಟೆಯವರೆಗೆ ಮಾತ್ರ ನಡೆಸತಕ್ಕದ್ದು.
14. ಈಗಿರುವ ಹೋಟೇಲ್ ಕಟ್ಟಡದಲ್ಲಿ ಯಾವುದೇ ಮಾರ್ಪಾಡು/ಹೊಸ ಜೋಡಣೆಯನ್ನು ಮಾಡತಕ್ಕದಲ್ಲ. ಒಂದು ವೇಳೆ ಮಾರ್ಪಾಡು/ಹೊಸ ಜೋಡಣೆ ಮಾಡುವ ಪ್ರಸಂಗ ಬಂದಲ್ಲಿ ಪ್ರಧಾನ ಜಿಲ್ಲಾ ನ್ಯಾಯಾಧೀಶರಿಂದ ಲಿಖಿತ ಪೂರ್ವಾನುಮತಿ ಪಡೆಯತಕ್ಕದ್ದು. ಪೂರ್ವಾನುಮತಿ ಇಲ್ಲದೇ ಮಾರ್ಪಾಡು/ಹೊಸ ಜೋಡಣೆ ಮಾಡಿದಲ್ಲಿ ಗುತ್ತಿಗೆ ರದ್ದುಪಡಿಸಲಾಗುವುದು ಮತ್ತು ಅಂತವರ ವಿರುದ್ಧ ಸೂಕ್ತ ಕಾನೂನು ಕ್ರಮಕ್ಕೆಗೊಳ್ಳಲಾಗುವುದು.
15. ಸದರಿ ಕಟ್ಟಡದ ಅವಶ್ಯಕತೆ ಜಿಲ್ಲಾ ನ್ಯಾಯಾಂಗಕ್ಕೆ ಕಂಡುಬಂದಲ್ಲಿ ಗುತ್ತಿಗೆದಾರರು ಕಟ್ಟಡವನ್ನು ನೋಟೀಸ್ ಪಡೆದ 15 ದಿನಗಳೊಳಗಾಗಿ ತೆರವು ಮಾಡಬೇಕು. ಗುತ್ತಿಗೆದಾರರಿಗೆ ಈ ಬಗ್ಗೆ ಯಾವುದೇ ರೀತಿಯ ಪರಿಹಾರ ನೀಡಲಾಗುವುದಿಲ್ಲ.
16. ಸದರಿ ಹೋಟೇಲ್ (ಕ್ಯಾಂಟೀನ್) ಕಟ್ಟಡದಲ್ಲಿ ಆರೋಗ್ಯಕ್ಕೆ ಹಾನಿಕರವಾದ ವಸ್ತುಗಳು, ಗುಟ್ಕಾ, ಸಿಗರೇಟ್, ಮಾದಕದ್ರವ್ಯ, ಮಾದಕ ಪಾನೀಯ ಹಾಗೂ ಇತರೆ ಯಾವುದೇ ಅನಪೇಕ್ಷಿತ ವಸ್ತುಗಳನ್ನು

.......4

ಸಂಗ್ರಹಿಸಿ ಇಡತಕ್ಕದ್ದಲ್ಲ ಮತ್ತು ಮಾರಾಟ ಮಾಡತಕ್ಕದ್ದಲ್ಲ. ಸದರಿ ಕಟ್ಟಡವನ್ನು ಹೋಟೇಲ್ (ಕ್ಯಾಂಟೀನ್) ಉಪಯೋಗಕ್ಕೆ ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರಗಳಿಗೆ ಮತ್ತು ಕಾನೂನು ಬಾಹಿರ ಚಟುವಟಿಕೆಗಳಿಗೆ ಬಳಸಿಕೊಳ್ಳತಕ್ಕದ್ದಲ್ಲ. ಒಂದು ವೇಳೆ ಬೇರೆ ಯಾವುದೇ ಉದ್ಯೋಗಕ್ಕೆ/ಉದ್ದೇಶಕ್ಕೆ ಬಳಸಿಕೊಂಡಿದ್ದು ಕಂಡು ಬಂದಲ್ಲಿ ಸದರಿ ಗುತ್ತಿಗೆಯನ್ನು ರದ್ದುಪಡಿಸಲಾಗುವುದು.

17. ಸದರಿ ಹೋಟೇಲ್ ಉದ್ಯಮದಿಂದ ನ್ಯಾಯಾಲಯದ ಯಾವುದೇ ಕಾರ್ಯಕಲಾಪಗಳಿಗೆ, ಕಕ್ಷಿದಾರರಿಗೆ, ನ್ಯಾಯವಾದಿಗಳಿಗೆ, ನ್ಯಾಯಾಲಯದ ಸಿಬ್ಬಂದಿಯವರಿಗೆ ಹಾಗೂ ವಾಹನಗಳ ಚಲನವಲನಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು.

18. ಸದರಿ ಹೋಟೇಲ್ (ಕ್ಯಾಂಟೀನ್) ಕಟ್ಟಡವನ್ನು ಮತ್ತು ಪರಿಸರವನ್ನು ಯಾವತ್ತೂ ಸ್ವಚ್ಛವಾಗಿ ಇಡತಕ್ಕದ್ದು. ಅಲ್ಲದೆ ಅಲ್ಲಿ ಉಪಯೋಗಿಸುವ ಪಾತ್ರೆ ಮತ್ತು ಇತರ ಅಡುಗೆ ಪರಿಕರಗಳನ್ನು ಸ್ವಚ್ಛ ಹಾಗೂ ಆರೋಗ್ಯ ಪೂರ್ಣವಾಗಿರುವಂತೆ ನೋಡಿಕೊಳ್ಳತಕ್ಕದ್ದು.

19. ಹೋಟೇಲ್ (ಕ್ಯಾಂಟೀನ್) ಕಟ್ಟಡಕ್ಕೆ ಹಾಗೂ ಕಟ್ಟಡದಲ್ಲಿ ಅಳವಡಿಸಿರುವ ವಿದ್ಯುತ್ ಉಪಕರಣಗಳು ಪೀಠೋಪಕರಣಗಳು ಹಾಗೂ ಇತರೆ ಅಳವಡಿಕೆಗಳಿಗೆ ಹಾನಿ ಸಂಭವಿಸಿದಲ್ಲಿ ಗುತ್ತಿಗೆದಾರರೇ ಜವಾಬ್ದಾರಿಯಾಗಿರುತ್ತಾರೆ.

20. ಸದರಿ ಹೋಟೇಲ್ (ಕ್ಯಾಂಟೀನ್) ಕಟ್ಟಡವನ್ನು ಅಧಿಕೃತ ಗುತ್ತಿಗೆದಾರರು ಬೇರೆ ಯಾರಿಗೂ ಬಾಡಿಗೆ/ಗುತ್ತಿಗೆ ಅಥವಾ ಇನ್ನಾವುದೇ ರೂಪದಲ್ಲಿ ಪರಭಾರೆ ಮಾಡತಕ್ಕದ್ದಲ್ಲ. ಗುತ್ತಿಗೆದಾರರು ಹೋಟೇಲ್ (ಕ್ಯಾಂಟೀನ್) ನಡೆಸಲು ಯಾವುದೇ ಕಾರಣಕ್ಕೂ ಬಾಲಕಾರ್ಮಿಕರನ್ನು ನೇಮಿಸಿಕೊಳ್ಳುವಂತಿಲ್ಲ.

21. ಗುತ್ತಿಗೆದಾರರು ತಮ್ಮ ಪರವಾನಿಗೆ ಪತ್ರ (ಲೈಸೆನ್ಸ್) ವನ್ನು ಕೇಳಿದಾಗ ತೋರಿಸತಕ್ಕದ್ದು. ಲೈಸೆನ್ಸ್ ಪಡೆದ ಗುತ್ತಿಗೆದಾರರು ಮಾತ್ರ ಈ ಉದ್ಯಮವನ್ನು ನಡೆಸಲು ಅರ್ಹರಾಗಿರುತ್ತಾರೆ.

22. ಸದರಿ ಕಟ್ಟಡದ ಗುತ್ತಿಗೆ ಅವಧಿಯು ಮೂರು ವರ್ಷಗಳಾಗಿದ್ದು, ಸದರಿ ಗುತ್ತಿಗೆ ಅವಧಿ ಮುಗಿದ 15 ದಿನಗಳ ಒಳಗಾಗಿ ಸದರಿ ಕಟ್ಟಡವನ್ನು ಖಾಲಿ ಮಾಡತಕ್ಕದ್ದು.

23. ಆಸಕ್ತ ಅರ್ಜಿದಾರರು ಮೇಲಿನ ಎಲ್ಲಾ ನಿಬಂಧನೆಗಳಿಗೆ ಒಳಪಟ್ಟು, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಕ್ಷಿಣ ಕನ್ನಡ ಇವರಿಗೆ ಟೆಂಡರ್ ಪ್ರಸ್ತಾವನೆಯನ್ನು ಮೊಹರಾದ ಲಕೋಟೆಯಲ್ಲಿ ಅನುಬಂಧ-1 ಮತ್ತು 2 ರಲ್ಲಿ ದಿನಾಂಕ 16.04.2025 ರಂದು ಸಂಜೆ 4.00 ಗಂಟೆಗೆ ಒಳಗಾಗಿ ಸಲ್ಲಿಸತಕ್ಕದ್ದು. ಲಕೋಟೆಯ ಮೇಲೆ Tender for Running District Court Canteen ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.

.......5

24. ಮೊಹರಾದ ಟೆಂಡರ್‌ಗಳನ್ನು ದಿನಾಂಕಃ 16.04.2025 ರಂದು ಸಂಜೆ 5.00 ಕ್ಕೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಗಳೂರು, ದಕ್ಷಿಣ ಕನ್ನಡ ಇವರ ಚೇಂಬರ್‌ನಲ್ಲಿ ಹಾಜರಿರುವ ಟೆಂಡರ್‌ದಾರರ ಸಮಕ್ಷಮದಲ್ಲಿ ತೆರೆಯಲಾಗುವುದು ಮತ್ತು ಅತೀ ಹೆಚ್ಚಿನ ಬಾಡಿಗೆಯ ಪ್ರಸ್ತಾವನೆ ಇರುವ ಟೆಂಡರ್‌ನ್ನು ಸ್ವೀಕರಿಸುವ ಅಧಿಕಾರವನ್ನು ಪ್ರಧಾನ ಜಿಲ್ಲಾ ನ್ಯಾಯಾಧೀಶರು ಹೊಂದಿರುತ್ತಾರೆ.
25. ಈ ಕೆಳಗೆ ಸಹಿ ಮಾಡಿದವರು ಯಾವುದೇ ಕಾರಣವನ್ನು ನೀಡದೆ ಟೆಂಡರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಾಗೂ ಟೆಂಡರ್ ಪ್ರಕ್ರಿಯೆಯನ್ನು ರದ್ದು ಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ.

**ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕಃ 16.04.2025 ರಂದು ಸಂಜೆ 4.00 ಗಂಟೆಯವರೆಗೆ**

ಈ ಟೆಂಡರ್ ಪ್ರಕ್ರಿಯೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೆಲಸದ ವೇಳೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿಯವರನ್ನು ಸಂಪರ್ಕಿಸಿ ಪಡೆಯಬಹುದು.

2/4

(ರವೀಂದ್ರ ಎಂ. ಜೋಶಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಕ್ಷಿಣ ಕನ್ನಡ, ಮಂಗಳೂರು.

Prl. District & Sessions Judge
Dakshina Kannada, Mangaluru

**ಪ್ರತಿಯನ್ನು ಪ್ರಚಾರಕ್ಕಾಗಿ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವ ಕೋರಿಕೆಯೊಂದಿಗೆ ಕಳುಹಿಸಲಾಗಿದೆಃ**

1. ಮಾನ್ಯ ಜಿಲ್ಲಾಧಿಕಾರಿಯವರು, ಮಂಗಳೂರು, ದಕ್ಷಿಣ ಕನ್ನಡ.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಗಳೂರು, ದಕ್ಷಿಣ ಕನ್ನಡ.
3. ಆಯುಕ್ತರು, ಮಂಗಳೂರು ಮಹಾನಗರ ಪಾಲಿಕೆ, ಮಂಗಳೂರು.
4. ತಹಶೀಲ್ದಾರರು, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ.
5. ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಮಂಗಳೂರು, ದಕ್ಷಿಣ ಕನ್ನಡ (ಪತ್ರಿಕಾ ಪ್ರಕಟಣೆಯ ಕುರಿತು)
6. ಅಧ್ಯಕ್ಷರು, ವಕೀಲರ ಸಂಘ, ಮಂಗಳೂರು, ದಕ್ಷಿಣ ಕನ್ನಡ.
7. ಮಂಗಳೂರಿನ ಎಲ್ಲಾ ನ್ಯಾಯಾಲಯಗಳಿಗೆ. (ಇ-ಮೇಲ್ ಮೂಲಕ)
8. ಸಾಫ್ಟ್‌ವೇರ್ ಟೆಕ್ನಿಶಿಯನ್, ಜಿಲ್ಲಾ ನ್ಯಾಯಾಲಯ (ಜಿಲ್ಲಾ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಣೆಗಾಗಿ)
9. ಕಚೇರಿ ಸೂಚನಾ ಫಲಕಕ್ಕೆ.

# ಅನುಬಂಧ-1

ಇವರಿಗೆ:
ಪ್ರಧಾನ ಜಿಲ್ಲಾ ನ್ಯಾಯಾಧೀಶರು,
ಜಿಲ್ಲಾ ನ್ಯಾಯಾಲಯ,
ದ.ಕ., ಮಂಗಳೂರು.

ಮಾನ್ಯರೇ,

ವಿಷಯ: ಹೋಟೇಲ್ ಕ್ಯಾಂಟೀನ್ ನಡೆಸಲು ಟೆಂಡರ್ ಸಲ್ಲಿಸುವ ಬಗ್ಗೆ.

ಉಲ್ಲೇಖ: ಟೆಂಡರ್ ಪ್ರಕಟಣೆ ಸಂಖ್ಯೆ /ಸಿಆರ್‌ಎಸ್/3921/2025 ದಿನಾಂಕ 02.04.2025 ಜಿಲ್ಲಾ ನ್ಯಾಯಾಲಯ, ದ.ಕ., ಮಂಗಳೂರು

* * * * *

ಈ ಕೆಳಗೆ ಸಹಿ ಮಾಡಿರುವ ಶ್ರೀಮತಿ/ಶ್ರೀ____________________________ಆದ ನಾನು/ನಾವು ಉಲ್ಲೇಖಿತ ಟೆಂಡರ್ ಪ್ರಕಟಣೆಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟು ದಕ್ಷಿಣ ಕನ್ನಡ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ಹೋಟೇಲ್ (ಕ್ಯಾಂಟೀನ್) ನಡೆಸಲು ಆಸಕ್ತರಿದ್ದು, ಈ ಮೂಲಕ ಈ ಕೆಳಗಿನ ವಿವರಗಳೊಂದಿಗೆ ಟೆಂಡರ್ ಸಲ್ಲಿಸುತ್ತಿದ್ದೇನೆ/ವೆ ಮತ್ತು ಕ್ಯಾಂಟೀನ್ ನಡೆಸುವ ಬಗ್ಗೆ ಕರಾರನ್ನು ಮಾಡಿಕೊಳ್ಳಲು ಒಪ್ಪಿರುತ್ತೇನೆ/ವೆ.

1. ಟೆಂಡರುದಾರರ ಹೆಸರು :

2. ಪೂರ್ಣ ವಿಳಾಸ :

   ಅ) ದೂರವಾಣಿ ಸಂಖ್ಯೆ :

   ಆ) ಮೊಬೈಲ್ ಸಂಖ್ಯೆ :

   ಇ) ಫ್ಯಾಕ್ಸ್ ಸಂಖ್ಯೆ :

   ಈ) ಇ-ಮೇಲ್ ವಿಳಾಸ :

3. EMD ಮೊಬಲಗಿನ ಬಗ್ಗೆ ಡಿಮ್ಯಾಂಡ್ ಡ್ರಾಫ್ಟ್‌ನ ಮೊತ್ತ ಸಂಖ್ಯೆ ಹಾಗೂ ದಿನಾಂಕ :

4. ಈ ಹಿಂದೆ ಸದರಿ ಹೋಟೇಲ್ (ಕ್ಯಾಂಟಿನ್) ನಡೆಸಿದ್ದೀರಾ :

5. ಪ್ರತಿ ತಿಂಗಳ ಬಾಡಿಗೆ ದರ :

6. ಉದ್ಯಮ ಪರವಾನಿಗೆ ವಿವರಗಳು
(ಪ್ರತಿಗಳನ್ನು ಲಗತ್ತಿಸುವುದು)

ಅ) ರಿಜಿಸ್ಟ್ರೇಷನ್ ನಂ. :

ಆ) ಪ್ಯಾನ್ ನಂ. :

ಇ) ಪ್ರಾವಿಡೆಂಟ್ ಫಂಡ್ ರಿಜಿಸ್ಟ್ರೇಷನ್ ನಂ.:

ಈ) ಇಎಸ್ಐ ರಿಜಿಸ್ಟ್ರೇಷನ್ ನಂ. :

ಉ) ಜಿಎಸ್‌ಟಿ ರಿಜಿಸ್ಟ್ರೇಷನ್ ನಂ. :

ಊ) ಟಿನ್ ನಂ. :

ಸ್ಥಳ:
ದಿನಾಂಕ:

ಟೆಂಡರುದಾರರ ಹೆಸರು ಹಾಗೂ ಸಹಿ
ಮೊಹರಿನೊಂದಿಗೆ

Prl. District & Sessions Judge
Dakshina Kannada, Mangaluru

# ಅನುಬಂಧ-2

## ಆಹಾರ ಪದಾರ್ಥಗಳ ಪ್ರಸ್ತಾವಿತ ದರಪಟ್ಟಿ (ಮಾದರಿ)

| ಕ್ರ. ಸಂ. | ತಿಂಡಿ/ಪಾನಿಯಗಳ ಹೆಸರು | ಪ್ರಮಾಣ (ml & gm) ಮತ್ತು ದರ | | ಕ್ರ. ಸಂ. | ತಿಂಡಿ/ಪಾನಿಯಗಳ ಹೆಸರು | ಪ್ರಮಾಣ (ml & gm) ಮತ್ತು ದರ | |
|---|---|---|---|---|---|---|---|
| | | ಪ್ರಮಾಣ | ದರ | | | ಪ್ರಮಾಣ | ದರ |
| 1 | ಟೀ | | | 32 | ಬನ್ಸ್ (1) | | |
| 2 | ಸ್ಪೆಷಲ್ ಟೀ | | | 33 | ಸಂಜೀರ | | |
| 3 | ಕಾಫಿ | | | 34 | ಬಿಸ್ಕಿಟ್‌ರೊಟ್ಟಿ | | |
| 4 | ಹಾಲು | | | 35 | ಬ್ರೆಡ್ ಜಾಮ್ | | |
| 5 | ಬಿಸಿ ಬಾದಾಮಿ ಹಾಲು | | | 36 | ಸ್ಯಾಂಡ್‌ವಿಚ್ | | |
| 6 | ಬೋರ್ನ್‌ವಿಟಾ/ಬೂಸ್ಟ್ | | | 37 | ಗ್ರಿಲ್ ಸ್ಯಾಂಡ್‌ವಿಚ್ | | |
| 7 | ತಂಪಾದ ಬಾದಾಮಿ ಹಾಲು | | | 38 | ಚೀಸ್‌ಗ್ರಿಲ್‌ಸ್ಯಾಂಡ್‌ವಿಚ್ | | |
| 8 | ಬಟ್ಟರ್ ಮಿಲ್ಕ್ | | | 39 | ಪೂರಿ (2) ಬಾಜಿ | | |
| 9 | ಲೆಮೆನ್ ಜ್ಯೂಸ್ | | | 40 | ಚಪಾತಿ (2) | | |
| 10 | ಪೈನಾಪಲ್ ಜ್ಯೂಸ್ | | | 41 | ಪರೋಟಾ | | |
| 11 | ಕಲ್ಲಂಗಡಿ ಜ್ಯೂಸ್ | | | 42 | ಮೊಸರು ಅವಲಕ್ಕಿ | | |
| 12 | ದಾಳಿಂಬೆ ಜ್ಯೂಸ್ | | | 43 | ಸೇವಿಗೆ ಬಾತ್ | | |
| 13 | ಆರೆಂಜ್ ಜ್ಯೂಸ್ | | | 44 | ಪ್ಲೇನ್ ದೋಸೆ | | |
| 14 | ಮ್ಯಾಂಗೋ ಜ್ಯೂಸ್ | | | 45 | ಮಸಾಲೆ ದೋಸೆ | | |
| 15 | ಗೋಳಿಬಜೆ | | | 46 | ಸೆಟ್ ದೋಸೆ (3) | | |
| 16 | ನೀರುಳ್ಳಿ ಪಕೋಡಾ | | | 47 | ರವಾ ದೋಸೆ | | |
| 17 | ಸಮೋಸಾ/ಕಟ್ಲೇಟ್ | | | 48 | ರಾಗಿ ದೋಸೆ | | |
| 18 | ಆಲೂ ಬೊಂಡಾ (1) | | | 49 | ಕಾಲಿ ದೋಸೆ (2) | | |
| 19 | ಅಂಬೊಡೆ (1) | | | 50 | ತುಪ್ಪ ದೋಸ (3) | | |
| 20 | ರವಾ ಇಡ್ಲಿ | | | 51 | ಆನಿಯನ್ ಉತ್ತಪ್ಪ | | |
| 21 | ಇಡ್ಲಿ ವಡಾ (2+1) | | | 52 | ಟೋಮ್ಯಾಟೊ ಬಾತ್ | | |
| 22 | ಇಡ್ಲಿ (2) | | | 53 | ರೈಸ್ ಬಾತ್ | | |
| 23 | ವಡಾ (1) | | | 54 | ಪುಳಿಯೋಗರೆ | | |
| 24 | ಕೇಸರಿ ಬಾತ್ | | | 55 | ಚಿತ್ರನ್ನ | | |
| 25 | ಉಪ್ಪಿಟ್ಟು | | | 56 | ಪ್ಲೇಟ್ ಊಟ | | |
| 26 | ಚೌಚೌ ಬಾತ್ | | | 57 | ಮೊಸರನ್ನ | | |
| 27 | ಬಾಳೆಹಣ್ಣಿನ ಪೋಡಿ | | | 58 | ಅನ್ನ ಸಂಬಾರ್ | | |
| 28 | ವಡಾಪಾವ್ | | | 59 | ಕಾಶಿ ಹಲ್ವಾ | | |
| 29 | ಬ್ರೆಡ್ ಬೊಂಡಾ | | | 60 | ಕ್ಯಾರೇಟ್ ಹಲ್ವಾ | | |
| 30 | ಸಜ್ಜಿಗೆ ರೊಟ್ಟಿ | | | 61 | ಗುಲಾಬ್ ಜಾಮೂನ್ | | |
| 31 | ದಹಿವಡಾ (1) | | | 62 | ಚಿಕ್ಕು ಶೀರ | | |

ಸ್ಥಳ:
ದಿನಾಂಕ:

2/4

Prl. District & Sessions Judge
Dakshina Kannada, Mangaluru

ಟೆಂಡರುದಾರರ ಹೆಸರು ಹಾಗೂ ಸಹಿ
ಮೊಹರಿನೊಂದಿಗೆ